### ಕಲ್ಪನೆಗೆ ರೆಕ್ಕೆಮೂಡಿತು...

'ಬದುಕು ಕಟ್ಟಿಕೊಳ್ಳಲು ದಾರಿ ನೂರೆಂಟು. ನಮ್ಮ ಆಯ್ಕೆ ಯಾವತ್ತೂ ಜಾಣ್ಮೆಯಿಂದಿರಬೇಕು. ನನ್ನ ಆಸಕ್ತಿಗನುಗುಣವಾಗಿ ಚಿತ್ರಕಲೆಯನ್ನೇ ನನ್ನ ಬದುಕಿನ ಮಾಧ್ಯಮವಾಗಿ ಆಯ್ದುಕೊಂಡೆ. ಇದಕ್ಕಾಗಿ ಅಮೆರಿಕದಲ್ಲಿ ಫೈನ್ ಆರ್ಟ್ಸ್ ಹಾಗೂ ಪ್ರಿಂಟ್ ಮೇಕಿಂಗ್‌ನಲ್ಲಿ ಸ್ನಾತಕೋತ್ತರ ಪದವಿ ಮುಗಿಸಿದೆ. ಕಲೆಯಲ್ಲಿ ನನ್ನ ಕನಸು, ಕಲ್ಪನೆಗೆ ರೆಕ್ಕೆ ಮೂಡಿದೆ. ಇಲ್ಲಿ ಸಿಕ್ಕಿದ ಅವಕಾಶ, ಅನುಭವ ಮುಂದಿನ ಕಲಾಪಯಣಕ್ಕೆ ದಾರಿದೀಪ' ಎನ್ನುತ್ತಾರೆ ಅಮೆರಿಕದಿಂದ ಬಂದು ಕಲಾಧ್ಯಯನ ನಿರತರಾಗಿರುವ ಭಾಷಾ ಚಕ್ರಬರ್ತಿ.

### ಛಾಯಾಗ್ರಹಣದ ಜಾಡಿನಲ್ಲಿ...

ಗೋವಾ ಮೂಲದ ಶರಭೇಂದು ದೇ ಅವರಿಗೆ ಸಮಕಾಲೀನ ಲೆನ್ಸ್ ಆಧರಿತ ಕಲೆಯಲ್ಲಿ ಆಸಕ್ತಿ. ಇದು ಛಾಯಾಗ್ರಹಣದ ಒಂದು ಭಾಗವಾದರೂ ಚಿತ್ರಕ್ಕಿಂತಲೂ ಕಲಾತ್ಮಕತೆಗೇ ಹೆಚ್ಚು ಆದ್ಯತೆ. ನ್ಯಾಷನಲ್ ಜಿಯಾಗ್ರಫಿಕ್ ಸೊಸೈಟಿಯಲ್ಲಿ ಛಾಯಾಗ್ರಹಣದಲ್ಲಿ ತರಬೇತಿ ಪಡೆದುಕೊಂಡ ಶರಭೇಂದು, 'ಹಂಪಿ ಆರ್ಟ್ ಲ್ಯಾಬ್‌ನಲ್ಲಿ ಅಧ್ಯಯನ ಕೈಗೊಂಡು ಈ ರಂಗದಲ್ಲಿ ಹೆಚ್ಚು ಮಿಂಚುವ ಇಂಗಿತವಿದೆ' ಎನ್ನುತ್ತಾರೆ. ಥೀಮ್ ಆಧರಿತ ಛಾಯಾಚಿತ್ರ ಪ್ರದರ್ಶನವನ್ನು ದೇಶದಾದ್ಯಂತ ಏರ್ಪಡಿಸಿದ ಅನುಭವವೂ ಇವರಿಗಿದೆ.





ಸಂಗೀತಾ ಜಿಂದಾಲ್

ಪರಿಕಲ್ಪನೆಯಂತೆ ಇಲ್ಲಿನ ಸ್ಟುಡಿಯೊವನ್ನು ವಿನ್ಯಾಸಗೊಳಿಸಲಾಗಿದೆ.

ಸೆರಾಮಿಕ್ ಪೈಂಟಿಂಗ್, ಕ್ಲೇ ಮಾಡೆಲ್, ಶಿಲ್ಪಕಲೆ, ಅಮೂರ್ತ ಚಿತ್ರಕಲೆ, ಪಾಟರಿ, ಪ್ರಿಂಟ್ ಮೇಕಿಂಗ್, ಸೃಜನಶೀಲ ಕಲೆ, ಸಮಕಾಲೀನ ಲೆನ್ಸ್ ಆಧರಿತ ಕಲೆಗಾರಿಕೆ... ಇವೇ ಮುಂತಾದ ವಿಷಯಗಳ ಬಗ್ಗೆ ದೇಶ ವಿದೇಶಗಳಿಂದ ಬಂದ ಕಲಾವಿದರಿಗೆ ಮೂರು ತಿಂಗಳ ಕಲಾ ಅಧ್ಯಯನಕ್ಕೆ ಅವಕಾಶ ಕಲ್ಪಿಸಲಾಗಿದೆ. ಸದ್ಯ ಇಲ್ಲಿ ಅಮೆರಿಕ, ಢಾಕಾ, ಗೋವಾ, ಉದಯಪುರ ಮುಂತಾದ ಕಡೆಗಳಿಂದ ಬಂದ ಕಲಾವಿದರು ಅಧ್ಯಯನನಿರತರಾಗಿದ್ದಾರೆ. ಸುಸಜ್ಜಿತ ಸ್ಟುಡಿಯೊ ಇಲ್ಲಿದ್ದು, ಕಲಾಕಾರರಿಗೆ ಅದ್ಭುತ ಸೌಲಭ್ಯಗಳು ಒಂದೆಡೆ ಸಿಗುವಂತಾಗಿದೆ. ಮೂರು ತಿಂಗಳ ಬಳಿಕ ಇವರೆಲ್ಲರ ಕಲ್ಪನೆಯ ಮೂಸೆಯಲ್ಲಿ ಅರಳಿದ ಚಿತ್ರಕಲೆಯನ್ನು ಅನಾವರಣಗೊಳಿಸಿ, ಆಸಕ್ತರಿಗೆ ವೀಕ್ಷಣೆಗೂ ಅವಕಾಶ ಕಲ್ಪಿಸುವ ವ್ಯವಸ್ಥೆ ಈ ಹಂಪಿ ಆರ್ಟ್ ಲ್ಯಾಬ್‌ನಲ್ಲಿ ಲಭ್ಯ.

ಕಲೆಗೆ ಬೇಕಾದ ಸಾಮಗ್ರಿಗಳು, ಮುದ್ರಣ ತಯಾರಿಕೆ, ಕಲ್ಲು ಮತ್ತು ಲೋಹದ ಶಿಲ್ಪಕಲೆ, ಸೆರಾಮಿಕ್ ಕಲೆಯ ಉತ್ತೇಜನಕ್ಕಾಗಿ ಇಲ್ಲಿ ಕಾರ್ಯಾಗಾರಗಳನ್ನೂ ನಡೆಸಲಾಗುತ್ತದೆ. ಕಲಾವಿದರು ಈ ಪ್ರದೇಶದ ಸಮೃದ್ಧ ಕರಕುಶಲ ಸಂಸ್ಕೃತಿ ಮತ್ತು ಸಂಪ್ರದಾಯಗಳು, ಅತ್ಯಾಧುನಿಕ ಕಲಾ ತಂತ್ರಗಳಿಂದ ತಮ್ಮ ಅಧ್ಯಯನವನ್ನು ಉಚಿತ ವಸತಿ ಸಹಿತ ಕೈಗೊಳ್ಳಬಹುದಾಗಿದೆ.

ಈ ಆರ್ಟ್ ಲ್ಯಾಬ್‌ನಲ್ಲಿ ಶೈಕ್ಷಣಿಕ ಕಾರ್ಯಕ್ರಮ, ಶಾಲಾ ಕಾಲೇಜಿನ ಮಕ್ಕಳಿಗೆ ಕಲಿಕಾ ಚಟುವಟಿಕೆಗಳು, ಕಾರ್ಯಾಗಾರಗಳನ್ನು ಏರ್ಪಡಿಸಲು ಅವಕಾಶ ಕಲ್ಪಿಸಲಾಗಿದೆ. ಜಾಗತಿಕ ಮಟ್ಟದಲ್ಲಿ ಕಲೆಯನ್ನು ಪೋಷಿಸಿ ಸಾಂಸ್ಕೃತಿಕ ಬಾಂಧವ್ಯ ಬೆಸೆಯಲು ಸಂಸ್ಥೆ ಸಹಕಾರಿಯಾಗಿದೆ.

### ಸಮಕಾಲೀನ ಕಲೆಗೆ ಉತ್ತೇಜನ

ಜಗತ್ತು ಆಧುನಿಕತೆಯತ್ತ ದಾಪುಗಾಲು ಹಾಕುತ್ತಿರುವ ಸಂದರ್ಭದಲ್ಲಿ ಕಲಾ ಜಗತ್ತಿನಲ್ಲೂ ಅಭೂತಪೂರ್ವ ಬದಲಾವಣೆ ಆಗಿದೆ. ದೇಸೀ ಕಲೆ ಮತ್ತು ಕಲಾವಿದರಿಗೆ ಉತ್ತೇಜನ ನೀಡಲೆಂದೇ ಈ ಆರ್ಟ್ ಲ್ಯಾಬ್ ನಿರ್ಮಿಸಲಾಗಿದೆ.

'ನಮ್ಮ ಕಲೆಯನ್ನು ವಿದೇಶೀಯರೂ ಕೊಂಡಾಡುವಂತೆ ಮಾಡುವುದು ನಮ್ಮ ಧ್ಯೇಯ. ಇದನ್ನು ಸಾಂಸ್ಕೃತಿಕ ತಾಣವಾಗಿ ರೂಪಿಸುವುದು ನಮ್ಮ ಗುರಿ' ಎಂದು ಹೇಳುತ್ತಾರೆ 'ಹಂಪಿ ಆರ್ಟ್ ಲ್ಯಾಬ್'ನ ಸಂಸ್ಥಾಪಕಿ ಸಂಗೀತಾ ಜಿಂದಾಲ್.

'ಹಂಪಿಗೂ ತಮಗೂ ಅವಿನಾಭಾವ ನಂಟು. ಸುಮಾರು 40 ವರ್ಷಗಳಿಂದ ಪ್ರಾಚೀನ ಹಂಪಿಯೊಂದಿಗೆ ಒಡನಾಟ ಹೊಂದಿದ್ದು, ಪರಂಪರೆ ಹಾಗೂ ಪ್ರಕೃತಿಯೊಂದಿಗೆ ಸಮಕಾಲೀನ ಕಲೆಯನ್ನೂ ವಿಲೀನಗೊಳಿಸುವ ಪ್ರಯತ್ನ ಇದಾಗಿದೆ. ಈ ಆರ್ಟ್ ಲ್ಯಾಬ್ ನಿರ್ಮಾಣಕ್ಕೆ ತಮ್ಮ ತಾಯಿ ಊರ್ಮಿಳಾ ಕನೋರಿಯಾ ಅವರೂ ಪ್ರೇರಣೆ' ಎನ್ನುತ್ತಾರೆ ಅವರು. ಚಿತ್ರ ಕಲಾವಿದರ ಪ್ರತಿಭೆ ಪೊರೆಯಲು ಈ ಕೇಂದ್ರ ಸಹಾಯಕ. ಹಂಪಿಯ ಕಲಾತ್ಮಕ ಹಾಗೂ ಆಧ್ಯಾತ್ಮಿಕ ಶಕ್ತಿಯನ್ನು ಪ್ರತಿಬಿಂಬಿಸಲು ಸಹಕಾರಿ ಎನ್ನುವುದು ತಾರಿಣಿ ಜಿಂದಾಲ್ ಅವರ ಅನಿಸಿಕೆ.

'ಜೆಎಸ್‌ಡಬ್ಲ್ಯು ಫೌಂಡೇಷನ್' ಆಹ್ವಾನದ ಮೇರೆಗೆ ಲೇಖಕಿ 'ಹಂಪಿ ಆರ್ಟ್ ಲ್ಯಾಬ್'ಗೆ ಭೇಟಿ ನೀಡಿದ್ದರು.



ಕ್ಯಾನ್ಸರ್ ಇದೆಯೇ? 1ನೇ ಹಂತದಲ್ಲಿದೆಯೇ? ನರದ ತೊಂದರೆಯೇ?
ಡಯಾಬಿಟಿಸ್ ಇದೆಯೇ? ಕೂದಲು ಮತ್ತು ಚರ್ಮದ ಸಮಸ್ಯೆ ಇದೆಯೇ?
ಎಲ್ಲ ಸಮಸ್ಯೆಗಳಿಗೆ ಆಯುರ್ವೇದ ಚಿಕಿತ್ಸೆಗಾಗಿ ತಕ್ಷಣ ಸಂಪರ್ಕಿಸಿ.
ಕಪಿಲಾ ಆರೋಗ್ಯಧಾಮ
ತ್ಯಾವರೆಕೊಪ್ಪ, ಶಿವಮೊಗ್ಗ-577204.
ಸಮಯ: ಪ್ರತಿದಿನ ಸಂಜೆ 4ರ ನಂತರ
ದೂರವಾಣಿ ಸಂಖ್ಯೆ: 07619553245, 08277196659, 09449079052
ಲೊಕೇಷನ್‌ಗಾಗಿ QR Code ಸ್ಕ್ಯಾನ್ ಮಾಡಿ
ಸಂದರ್ಶನ/ಸಮಾಲೋಚನೆ ಉಚಿತ
ಸ್ಥಳ: ಶಿವಮೊಗ್ಗ ಲಯನ್ ಸಫಾರಿ ಹತ್ತಿರ